ಮುಂದಿನ ಆನುಭಾವಿಕ ಸಾಹಿತ್ಯಕ್ಕೆಲ್ಲ ಅದು ತಾಯಿಯಂತಾಯಿತು. ಅನುಭಾವ ಸಾಹಿತ್ಯ ಪರಂಪರೆಯ ನಿರಂತರ ಹರಿವಿಗೆ ಪ್ರೇರಣೆ ನೀಡಿದ್ದೂ ಅದೇ.

- ದೀರ್ಘಕಾಲ ಅಧ್ಯಾಪನ ವೃತ್ತಿಯನ್ನು ಮಾಡಿದವರು ನೀವು. ನಿಮಗೆ ಅದು ವೃತ್ತಿಯಾಗಿರಲಿಲ್ಲ; ವಿದ್ಯಾರ್ಥಿಗಳ ಸಮಗ್ರ ಬದುಕನ್ನು ರೂಪಿಸುವ ತಪೋಕ್ರಿಯೆಯಾಗಿತ್ತು. ಅಂಥ ನಿಮಗೆ, ವರ್ತಮಾನದ ಶಿಕ್ಷಣ ಕ್ಷೇತ್ರ, ಪ್ರಾಧ್ಯಾಪಕರು ಮತ್ತು ವಿದ್ಯಾರ್ಥಿಗಳು – ಈ ತ್ರಿಕೋನದ ಮೂರೂ ಕೋನಗಳು ಸಮಭುಜದಲ್ಲಿ ಇವೆ ಅಂತ ಅನ್ನಿಸ್ತದೆಯೆ?

ಶಿಕ್ಷಕ ವೃತ್ತಿಯೆಂದರೆ ನಾನು ಆಗಲೇ ಹೇಳಿದಂತೆ ಅದು ನಿರಂತರ ವಿದ್ಯಾರ್ಥಿಯಾಗುವ ವೃತ್ತಿ. ಅದು ಒಂದು ಯೋಗಮಾರ್ಗ. ಉಳುವ ರೈತನನ್ನು ಕುವೆಂಪು 'ನೇಗಿಲ ಯೋಗಿ' ಎಂದಿದ್ದಾರೆ. ಪ್ರಾಚೀನ ಕಾಲದಲ್ಲಿ ಋಷ್ಯಾಶ್ರಮಗಳೇ ಶಿಕ್ಷಣ ಕೇಂದ್ರಗಳಾಗಿದ್ದವು. ಟಿ.ಎಸ್. ವೆಂಕಣ್ಣಯ್ಯ, ಕೆ.ಜಿ. ಕುಂದಣಗಾರ ಇವರನ್ನು, ಕುವೆಂಪು ಅಂಥವರನ್ನು ಬರೀ ಪ್ರಾಧ್ಯಾಪಕರು ಅನ್ನುವಂತಿಲ್ಲ. ಇವರ ಆದರ್ಶ ನನ್ನಂಥವರಿಗೆ ಒಂದು ದಾರಿದೀಪ ಅಷ್ಟೆ.

ವರ್ತಮಾನದ ಶಿಕ್ಷಣ ಕ್ಷೇತ್ರ ಕೆಟ್ಟಿಲ್ಲ. ಅಲ್ಲಿ ಬೇಕಾದಷ್ಟು ಪರಿಶ್ರಮವಿದೆ. ಆದರೆ ಧ್ಯೇಯ ಧೋರಣೆಯಲ್ಲಿ ಬದಲಾವಣೆಯಾಗಿದೆ. ಅಂಕಗಳಿಕೆ, ಒಳ್ಳೆಯ ವೃತ್ತಿ ಸಂಪಾದನೆ ಸಂಪೂರ್ಣ ತಪ್ಪಲ್ಲ, ಆಡಂಬರ, ಆಢ್ಯತೆ, ಗಾಂಧಿ ಗುರುತಿಸಿದ್ದ **Education without character** ಇವು ಅಪಾಯಕಾರಿ. ನನ್ನದು ಗಾಂಧೀ ಪಥ. ಶ್ರೀಅರವಿಂದರ ಪೂರ್ಣಯೋಗ ಪಥವೂ ಅಹುದು. ವರ್ತಮಾನದ ಶಿಕ್ಷಣ ವ್ಯವಸ್ಥೆಯ ತ್ರಿಕೋನದಲ್ಲಿ ಸಮನ್ವಯದ ಕೊರತೆ ಇದೆ. ಅದು ಎಲ್ಲವನ್ನೂ ನುಂಗಿಹಾಕುತ್ತಿರುವಂತೆ ಭಾಸವಾಗುತ್ತಿದೆ.

- ಸೃಜನಶೀಲವೆನ್ನಲಾಗದ ನಿಮ್ಮ ವಿಮರ್ಶೆ, ಅನುವಾದ, ಸಂಪಾದನೆ, ಪ್ರವಾಸ ಕಥೆ, ಶರಣರ ಸಂಕಥನಗಳು ನಿಮಗೆ ಕೊಟ್ಟ ತೃಪ್ತಿ ಎಂಥದ್ದು?

ಸೃಜನಶೀಲತೆಯಿಂದ ಚಿಂತನಶೀಲತೆಯೆಡೆಗೆ ಹೊರಳುವುದಕ್ಕೆ ನನ್ನ ಅಧ್ಯಾಪಕ ವೃತ್ತಿಯೂ ಕಾರಣವಾಗಿದೆ. ನಾನು ಬಾಲ್ಯದಿಂದಲೂ ಓದುಗುಳಿ. ಅದೂ ನನ್ನ ಗದ್ಯ ಬರವಣಿಗೆಗೆ ಪೋಷಣೆ ನೀಡಿದೆ. ನಾನು ಏನು ಇದ್ದೇನೆಯೋ, ಏನು ಮಾಡಿದ್ದೇನೆಯೋ, ಏನನ್ನು ಮಾಡಬೇಕೆಂದಿದ್ದೇನೆಯೋ ಅದು ನನ್ನ ಬರವಣಿಗೆಯಲ್ಲಿ ಮೈದಾಳಿದೆ. ಮಾಡಲಾರದ್ದರ ಬಗ್ಗೆ ಅತೃಪ್ತಿ ಇಲ್ಲ; ಮಾಡಿದ್ದರ ಬಗ್ಗೆ ಅಹಂ ಇಲ್ಲ. ನಡೆದ ದಾರಿಯ ಬಗ್ಗೆ ತೃಪ್ತಿ ಇದೆ.

- ಎಲ್ಲರಿಗೂ ಗೊತ್ತಿರುವ ಹಾಗೆ ಅಥವಾ ಎಲ್ಲರೂ ಪಾಲುದಾರರಾಗಿರುವ ಹಾಗೆ ವರ್ತಮಾನದ ನಮ್ಮ ಬದುಕು ಅರ್ಥಾವಲಂಬಿಯಾಗಿದೆ. ಕೆಟ್ಟ ರಾಜಕಾರಣ ಎಲ್ಲ ರಂಗಗಳಲ್ಲೂ ಹೊಕ್ಕು ಇಡೀ ಬದುಕನ್ನೇ ಹದಗೆಡಿಸುತ್ತಿದೆ. ಪ್ರಾಮಾಣಿಕತೆ ಹಾಗೂ ಮಾನವೀಯ ಸಂಬಂಧಗಳೇ ನಶಿಸಿ ಹೋಗುತ್ತಿವೆ. ಒಟ್ಟಾರೆ ಇಡೀ ನಾಗರಿಕತೆಯೇ ಒಂದು 'ಅಸಾಂಸ್ಕೃತಿಕ' ಮತ್ತು 'ಅನೈತಿಕ' ವ್ಯವಹಾರವಾಗುತ್ತಿದೆ. ಬರಹ ಮತ್ತು ಬರಹಗಾರನ ನಡುವಿನ ಅಂತರ ಹೆಚ್ಚಾಗುತ್ತಿದೆ. ಎಲ್ಲವನ್ನೂ ಎಲ್ಲಿಯೋ ಕಳಕೊಳ್ಳುತ್ತಿದ್ದೇವೆಂಬ ಆತಂಕ ವಿಚಾರವಂತರನ್ನು ಕಾಡುತ್ತಿದೆ. ಹೀಗೆ ಮಾತಾಡುವುದೂ ಅಸಂಗತವೇನೋ ಎಂಬಂಥ ವಾತಾವರಣ ನಿರ್ಮಾಣವಾಗಿಬಿಟ್ಟಿದೆ. ಹೇಗೆ ಈ ಪರಿಸ್ಥಿತಿ ಬದಲಾಗೋದು?

ವಿಕೃತ ಬದುಕು, ಕೆಟ್ಟ ರಾಜಕಾರಣ, ಅನೈತಿಕ ವ್ಯವಹಾರ–ಇತ್ಯಾದಿಗಳ ಕುರಿತು ಎಲ್ಲ ಕಾಲದಲ್ಲಿಯೂ ಘರ್ಷಣೆ ಇದ್ದೇ ಇದೆ. ಕರ್ನಾಟಕದಲ್ಲಿ ಎಂ. ವಿಶ್ವೇಶ್ವರಯ್ಯನಂಥವರು,